ಕತೆಯ ಬರವಣಿಗೆ ಮುಗಿದರೂ ಅದನ್ನು ನನ್ನಿಂದ ಬೇರ್ಪಡಿಸಲು ಮನಸ್ಸೇ ಬಂದಿರುವುದಿಲ್ಲ. ಬರೆದು ಮುಗಿಸಿದ ಎಷ್ಟೋ ದಿನಗಳ, ಕೆಲವೊಮ್ಮೆ ತಿಂಗಳುಗಳ ವರೆಗೆ ಅದು ನನ್ನೊಟ್ಟಿಗೇ ಇರಬೇಕು. ಆಗಾಗ್ಗೆ ಕಂಪ್ಯೂಟರ್ ತೆರೆದು ಆ ಕತೆಯ ಪುಟಗಳಿಗೆ ಹೋಗಿ ಓದಿ ಅಲ್ಲಲ್ಲಿ ಸವರಬೇಕು. ಬೇಕಾದಲ್ಲಿ ತಿದ್ದುತ್ತ, ಶಬ್ದಗಳನ್ನು ಬದಲಾಯಿಸುತ್ತ, ವಾಕ್ಯಗಳನ್ನು ಹಿಂದುಮುಂದು ಮಾಡುತ್ತ, ಕೆಲವೊಂದು ಆಡುಮಾತುಗಳನ್ನು, ಗಾದೆಯ ನುಡಿಗಳನ್ನು ಸೇರಿಸುತ್ತ ಶಿಲ್ಪಕ್ಕೆ ರೂಪುಕೊಡುವ ಈ ಸೂಕ್ಷ್ಮ ಕೆತ್ತನೆಯ ಕೆಲಸವು ನನ್ನ ಅತ್ಯಂತ ಮೆಚ್ಚಿನ ಭಾಗ. ಎಷ್ಟೋ ವಿಷಯಗಳನ್ನು ಬಾಯಿಬಿಟ್ಟು ಹೇಳದೆ ಬಿಡುವುದರಲ್ಲಿ ಕತೆಯ ಗಟ್ಟಿತನ ಇರುವುದೆಂದು ನನಗೇಕೋ ಅನಿಸುವುದರಿಂದಾಗಿ, ಆದಷ್ಟು ಕಡಿಮೆ ಶಬ್ದಗಳಲ್ಲಿ ಕತೆ ಹೇಳಬೇಕೆಂಬ ಗುರಿಯಿಂದ, ಈ ಸಾಲು ನಿಜಕ್ಕೂ ಬೇಕೇ, ಈ ಶಬ್ದದ ಅಗತ್ಯವಿದೆಯೇ ಎಂದು ಅರಸುತ್ತ, ಸಾಗುತ್ತೇನೆ. ಮತ್ತೊಂದೆಂದರೆ, ಪ್ರತೀ ವಾಕ್ಯಕ್ಕೂ ನಾನು ಒಂದು ಲಯವನ್ನು ಬಯಸುತ್ತೇನೆ. ಅದನ್ನು ಬೇರೊಬ್ಬರಿಗೆ ವಿವರಿಸುವುದು ಕಷ್ಟ. ಕಿವಿಗೂ ಮನಸ್ಸಿಗೂ ಹಿತವಾಗುವಂತೆ ವಾಕ್ಯದ ಶಬ್ದಗಳೆಲ್ಲ ಒಂದು ಲಯದಲ್ಲಿ ಇರಬೇಕೆಂಬುದರ ಕಡೆಗೆ ನನ್ನ ಒತ್ತು.

ಒಂದು ಉತ್ತಮ ಕತೆಯು ಬಹಳ ಕಾಲ ಕತೆಗಾರನದಾಗಿ ಉಳಿಯುವುದಿಲ್ಲ. ಅದಕ್ಕೆ ತನ್ನದೇ ಆದ ವ್ಯಕ್ತಿತ್ವ ಬಂದುಬಿಡುತ್ತದೆ. ಅದರಲ್ಲಿನ ಪಾತ್ರಗಳು ಕತೆಗಾರನು ಎಂದೂ ಭೇಟಿಯಾಗದ ವ್ಯಕ್ತಿಗಳ ಗೆಳೆಯರಾಗಬಹುದು; ಕಥಾವಸ್ತುವು ನೂರಾರು ಅಪರಿಚಿತರ ಬದುಕಿನ ಕನ್ನಡಿಯಾಗಬಹುದು. ಒಮ್ಮೆ ಮೈಸೂರಿನ ಓದುಗರೊಬ್ಬರು ಕಣ್ಣು ಹನಿ ಮಾಡಿಕೊಂಡು, 'ನೀವು ನನ್ನದೇ ಕತೆ ಬರೆದಿದ್ದೀರಿ,' ಎಂದರು. ಇನ್ನೊಮ್ಮೆ ರಾಣೆಬೆನ್ನೂರಿನಿಂದೊಬ್ಬರು ಫೋನು ಮಾಡಿ, 'ರೀ, ನಿಮ್ಮ (ಕಾದಂಬರಿಯ) ಅನಂತಯ್ಯನ್ನ ಒಮ್ಮೆ ನೋಡಬೇಕಂತ ಅನ್ನಿಸ್ತದ್ರೀ,' ಎಂದಿದ್ದರು. ಕತೆ ಬರೆದುದರ ಬಗ್ಗೆ ಸಾರ್ಥಕತೆ ಅನಿಸುವುದು ಆಗ.

ವಿಮರ್ಶಕ ಟಿ.ಪಿ. ಅಶೋಕ ಅವರು ಒಂದು ಕಡೆ, 'ಮಾಯಕದ ಸತ್ಯ' ಕಥಾಸಂಕಲನದಲ್ಲಿ 'ಲೇಖಕಿ ಕತೆ ಕಥನಗಳ ಸ್ವರೂಪ ಮತ್ತು ಪರಿಣಾಮಗಳ ಬಗ್ಗೆಯೂ ಚಿಂತಿಸಿದ್ದಾರೆ' ಎಂದಿದ್ದರು. 'ಓರ್ವ ಯಶಸ್ವೀ ಕತೆಗಾರ್ತಿ ತಮ್ಮ ಸದ್ಯದ ಸಾಹಿತ್ಯಕ ಘಟ್ಟದಲ್ಲಿ ಒಂದು ಕ್ಷಣ ನಿಂತು ಕಥನ ಕಲೆಯ ಬಗ್ಗೆಯೇ ಆಲೋಚನೆಯಲ್ಲಿ ತೊಡಗಿರುವುದು ಗಮನಿಸಬೇಕಾದ ಒಂದು ಮುಖ್ಯ ಅಂಶವಾಗಿದೆ,' ಎಂದಾಗ ನನಗೆ ಹೌದಲ್ಲವೇ ಎಂದೆನಿಸಿತು.

ಯಾವುದೇ ಕತೆಯನ್ನು ಬರೆದ ಮೇಲೆ ನನಗೆ ಪೂರ್ತಿ ಸಮಾಧಾನ ಸಿಕ್ಕಿದ್ದು ಕಡಿಮೆಯೇ. ಅಂದರೆ ಕತೆಯಲ್ಲಿ ಬರುವ ಪಾತ್ರದ ಅಥವಾ ಸನ್ನಿವೇಶದ ಎಲ್ಲ ಮಗ್ಗಲುಗಳನ್ನು ತೋರಿಸುವುದು ಪ್ರಯಾಸಕರ. ನಿಜ ಬದುಕಿನ ಸಂಕೀರ್ಣತೆಯು ಎಷ್ಟು ಗಾಢವಾಗಿದೆಯೆಂದರೆ ನಮಗೆ ತಿಳಿದ ಭಾಷೆಯ ಮಿತಿಯೊಳಗೆ ಅದನ್ನು ಹಿಡಿದಿಡುವುದು ಕಷ್ಟ. ಭಾಷೆಯ ಹಂಗಿಲ್ಲದ ಅಭಿವ್ಯಕ್ತಿಗಳ ಮೂಲಕ ನಾವು ಎಷ್ಟೋ ಭಾವನೆಗಳನ್ನು, ಸೂಕ್ಷ್ಮಗಳನ್ನು ವ್ಯಕ್ತಪಡಿಸುತ್ತೇವಲ್ಲವೇ? ಸ್ವರದ ಭಾರವೇ ಇರಲಿ, ಮುಖಭಾವಗಳೇ ಆಗಲಿ, ಇನ್ನು ಕೆಲವೊಮ್ಮೆ ಬರೇ ಕೈ ಸನ್ನೆಗಳಷ್ಟೇ ಪುಟಗಟ್ಟಲೆಯ ಶಬ್ದಗಳು ಹೇಳಲಾರದ್ದನ್ನು ಹೇಳಬಲ್ಲವು. ಇಂಥವುಗಳು ಬರವಣಿಗೆಯಲ್ಲಿ ತಪ್ಪಿ ಹೋಗುವುದಿದೆ. ಹೀಗೆ ಎಷ್ಟೋ ಸಲ ಅನುಭವಗಳನ್ನು, ಮನಃಸ್ಥಿತಿಗಳನ್ನು, ಗ್ರಹಿಕೆಗಳನ್ನು ಸಮರ್ಪಕವಾಗಿ ವಿವರಿಸಲಾಗದೆ ಶಬ್ದಗಳು ನನ್ನನ್ನು ಸೋಲಿಸಿವೆ. ನುಡಿಗೆ ನಿಲುಕದ ಸಂವೇದನೆಗಳಿರುವ ನಮ್ಮೊಳಗಿನ ಆಳದ ಜಾಗಗಳನ್ನು ತಲುಪಲು ಭಾಷೆಗೂ ಕಷ್ಟ. ಈ ತೊಡರನ್ನು ಮೀರುವ ಪ್ರಯತ್ನ ನನ್ನದು; ಹಾಗೂ ಎಲ್ಲ ಲೇಖಕರದೂ ಕೂಡಾ.